ಏನೋ ಸಮಸ್ಯೆ ಆಗಿದೆ, ಎಲ್ಲಾ ಸೇರಿ ಪಂಚಾಯ್ತಿ ಮಾಡ್ತಿದ್ದಾರೆ ಅಂತ ಗೊತ್ತಾಗುವಷ್ಟು ದೊಡ್ಡವರಾಗಿದ್ವಿ ನಾವೆಲ್ಲಾ, ಆದ್ರೂ ಖಚಿತವಾಗಿ ಹೀಗೇ ಆಗಿದೆ ಅಂತ ಹೇಳೊದಿಕ್ಕೆ ಪೂರಕ ವಿಷಯಗಳು ಗೊತ್ತಿರಲಿಲ್ಲ. ಗೊತ್ತು ಮಾಡಿಕೊಳ್ಳೋದಕ್ಕೆ ಇದ್ದ ಒಂದೇ ದಾರಿ, ಕದ್ದು ಕೇಳಿಸಿಕೊಳ್ಳೋದು, ಆದನ್ನೆ ಮಾಡಿದ್ವಿ. ಗೊತ್ತಾಗಿದ್ದು ಇಷ್ಟು, ಪಾರಿ ಬಾವಿಗೆ ಹಾರಿಕೊಂಡಿದ್ದಳು. ಇವರೆಲ್ಲಾ ದೊಡ್ಡಪ್ಪನ ಎರಡು ಎಕರೆ ಜಮೀನು ಕೊಡ್ತೀವಂತ ಹೇಳಿದ್ದು. ನಮಗೆಲ್ಲಾ ಗಾಬರಿ, ನನಗಂತು ನಮ್ಮ ಕರಿಪಾರಿ ಬಾವಿಗೆ ಹಾರಿಕೊಂಡಿದ್ಲು ಅಂದ್ರೆ ಹೆದರಿಕೆ ಆಯ್ತು, ಹಾಗಾದ್ರೆ ಏನಾಗಿರಬಹುದು? ಪರಿಸ್ಥಿತಿ ನಾವಂದುಕೊಂಡಷ್ಟು ಸರಳವಾಗಿಲ್ಲ ಎನ್ನುವುದು ಖಾತ್ರಿಯಿತ್ತು. ಹದಿಹರೆಯದ ಬುದ್ಧಿಗೆ ಹೊಳೆಯುವುದನೆಲ್ಲಾ ಊಹೆ ಮಾಡಿ ವಿಚಾರ ವಿನಿಮಯ ಮಾಡಿಕೊಂಡೆವು. ಕಥೆ, ಕಾದಂಬರಿ, ಸಿನಿಮಾ ಜ್ಞಾನವನ್ನೆಲ್ಲಾ ಕ್ರೋಡೀಕರಿಸಿ ತಕ್ಕಮಟ್ಟಿಗೆ ಕಲ್ಪನೆ ಮಾಡಿಕೊಂಡು, ಕೆರಳಿದ ಕುತೂಹಲ ತಣಿಸಿಕೊಳ್ಳಲು ಮತ್ತೆ ನಮ್ಮ ಕಲ್ಪನಾ ಶಕ್ತಿಯನ್ನೂ ಪರೀಕ್ಷೆ ಮಾಡಿಕೊಳ್ಳಲು ಅಮ್ಮ, ಅತ್ತೆ, ಚಿಕ್ಕಮ್ಮ, ದೊಡ್ಡಮ್ಮ ಹೀಗೆ ಸಲಿಗೆ ಇದ್ದವರ ಬಳಿ ಹೋಗಿದ್ದು ಆಯ್ತು, ಮುದ್ದು ಮಾಡಿ ಹತ್ತಿರ ಕರೆಯುತ್ತಿದವರೆಲ್ಲಾ 'ಥೀ ಅಸಹ್ಯ... ಇದೆಲ್ಲಾ ನಿಮಗ್ಯಾಕೆ, ಟೆಂಟಿನಲ್ಲಿ ಹೊಸ ಸಿನಿಮಾ ಬಿಡುಗಡೆ... ರಾಜಣ್ಣಂದು ಬಂದಿದೆಯಂತೆ ಎಲ್ಲರೂ ಹೋಗ್ರಿ' ಅಂದು ಎಲ್ಲರಿಗೂ ದುಡ್ಡು ಕೊಟ್ಟು ಕಳಿಸಿಬಿಟ್ಟರು, ಕಾಡಿದ್ರು ದುಡ್ಡು ಕೊಡದಿದ್ದವರು ಇಂದು ಕೊಂಚ ಜಾಸ್ತೀನೆ ದುಡ್ಡು ಕೊಟ್ಟು ಅವಸರ ಮಾಡಿ ಅಟ್ಟಿದರಲ್ಲಾ... ಅನುಮಾನ ಇನ್ನೂ ಹೆಚ್ಚಾಯಿತು. ಆದ್ರೂ ಸಂಭ್ರಮದಿಂದ ಸಿನಿಮಾ ನೋಡಿ ಬಂದರೂ, ಹದಿಹರಯದ ಚಿತ್ತದಲ್ಲಿ ಅನುಮಾನದ ಹುತ್ತ ಕೊರೆದು ಕಾಡತೊಡಗಿತು. ಮನೆಗೆ ವಾಪಸ್ಸು ಬರುವುದರೊಳಗೆ ಗುಪ್ತ ಸಭೆ ಮುಗಿದು, ಗಂಡಸರ ಮುಖದಲ್ಲಿ ಗಾಬರಿ ಕಡಿಮೆಯಾಗಿತ್ತು. ತುಸು ನೆಮ್ಮದಿ ಇಣುಕಿ ನೋಡುತ್ತಿತ್ತು. ಹೆಂಗಸರ ಚಾವಡಿಯಲ್ಲಿ ಗೊಂದಲದ ಗುಸುಗುಸು ನೆಡೆದೇ ಇತ್ತು. ನಮ್ಮ ಆಗಮನದ ನಂತರ ಅದೂ ನಿಂತು ಹೋಯಿತು. ಊಟಕ್ಕೆ ಬಡಿಸಿ ಬೇಗನೆ ಮಲಗಿಸಿಬಿಟ್ಟರು ನಮ್ಮನ್ನೆಲ್ಲಾ, ರಾಜಕುಮಾರನ 'ಬಿಡುಗಡೆ' ಸಿನಿಮಾ ನೋಡಿ ಬಂದ ರೋಮಾಂಚನ, ಪಾರಿಯ ಪಾಡಿನ ದುಃಖಮಿಶ್ರಿತ ಅನುಮಾನಗಳು, ದೊಡ್ಡವರ ಗುಪ್ತಸಭೆ ಎಲ್ಲವೂ ಹೇಗೆಂರ್‍ರಾಗೆ ಬೆರೆತು ಎಡವಟ್ಟಾಗಿ ನಿದ್ದೆಯೇ ಬರಲಿಲ್ಲ. ಏನಾಗಿರಬಹುದು? ಪಾರಿ ಎಲ್ಲಿ? ದೊಡ್ಡಪ್ಪ ಎಲ್ಲೂ ಕಾಣಲೇ ಇಲ್ಲವಲ್ಲ. ದೊಡ್ಡಮ್ಮ ಹತ್ತಿರ ಕರೆದು ಎಂದಿನಂತೆ ಮುದ್ದುಗರೆಯಲಿಲ್ಲವಲ್ಲ. ಉತ್ತರವಿಲ್ಲದ ಪ್ರಶ್ನೆಗಳು ಕಾಡಿ ಬೆಳಗಾಗುವ ಹೊತ್ತಿಗೆ ಕೊಂಚ ಜೊಂಪು ಹತ್ತಲು, ಅಮ್ಮ ಬಂದು ಅವಸರವಾಗಿ ಎಬ್ಬಿಸಿ ಮೈಸೂರಿಗೆ ಹೋಗಬೇಕು ಎದ್ದೇಳಿ ಅಂದಾಗ ಒಂದೇ ಗಾಬರಿ, 'ಅಯ್ಯೋ ಒಂದೇ ದಿನಕ್ಕೆ ಬಂದ್ವಾ? ಇನ್ನೂ ಎರಡು ತಿಂಗಳು ರಜೆ ಇದೆಯಲ್ಲ'. ಉತ್ತರ ಕೊಡೋರ್‍ಯಾರು? ಮಾತಿಲ್ಲದೆ ಹೊರಡುವ ತಯಾರಿ ನಡೆಯಿತು. ಹಟ ಮಾಡಿದರೂ ನಡೆಯುವುದಿಲ್ಲ ಅಂತ ಅಮ್ಮ ಅಪ್ಪ ಇಬ್ಬರ ಗಂಭೀರ ಮುಖಭಾವ ನೋಡಿಯೇ ತಿಳಿಯಿತು. ಮೈಸೂರಿಗೆ ಬಂದ ಮೇಲೂ ಬಹಳ ದಿನಗಳು ಕಾಡಿತ್ತು ಪಾರಿ ವಿಷಯ. ಬಹಳ ದಿನಗಳು ಕಳೆದ ಮೇಲೆ ಒಂದು ದಿನ ಅಮ್ಮ ಬಾಯಿ ಬಿಟ್ಟರು. ವಿಷಯ ಗೊತ್ತಾದ ಮೇಲೆ ಯಾಕಾದ್ರೂ ಗೊತ್ತಾಯ್ತೋ ಅನ್ನಿಸಿಬಿಟ್ಟತು. ಎಷ್ಟು ಅಸಹ್ಯವಾಯಿತೆಂದರೆ, ತಲೆಯಿಂದ ಬಲವಂತವಾಗಿ ಈ ಹೊಲಸು ವಿಷಯವನ್ನು ಹೊರದಬ್ಬಲೆತ್ನಿಸಿದರೂ ತಿರುತಿರುಗಿ ಬಂದು ವಿಕಾರವಾಗಿ, ಬೃಹದಾಕಾರವಾಗಿ ರೂಪ ತಳೆದು ಎಲ್ಲೆಂದರಲ್ಲಿ ಕಾಡತೊಡಗಿತು. ಮನೆಯಲ್ಲಿ, ಊಟ ಮಾಡುವಾಗ, ಓದುವಾಗ, ಕಾಲೇಜಿನಲ್ಲಿ ಪಾಠ ಕೇಳುವಾಗ. ಎಷ್ಟು ಪ್ರಯತ್ನಿಸಿದರೂ ವಿಷಯದಿಂದ ಹೊರಬರಲಾಗುತ್ತಿಲ್ಲ. ಅಮ್ಮನೂ ಪೂರಾ ವಿವರವಾಗಿ ಹೇಳಲಿಲ್ಲ. ಮುಖ್ಯ ಮಾಹಿತಿಗಳನ್ನು ಕೊಟ್ಟು ಮಿಕ್ಕಿದ್ದನ್ನು ನನ್ನ ಕಲ್ಪನೆಗೆ ಬಿಟ್ಟು ಬಿಟ್ಟರು. ದೊಡ್ಡಪ್ಪನಿಗೂ ಪಾರಿಗೂ ಸಂಬಂಧ ಏರ್ಪಟ್ಟದ್ದು... ವಿಷಯ ಗೊತ್ತಾಗಿ ಗಲಾಟೆ ಮಾಡಬೇಕಾದ ದೊಡ್ಡಮ್ಮ ರಾಜಿಯಾಗಿ ಸಂಬಂಧ ಮುಂದುವರಿಯುವಂತೆ ಅನುಕೂಲ ವಾತಾವರಣ ಮಾಡಿಕೊಟ್ಟದ್ದು... ಪಾರಿ ಬಸುರಾದದ್ದು... ಹುಟ್ಟುವ ಮಗುವನ್ನು ಆಸ್ತಿಗೆ ವಾರಸುದಾರನನ್ನಾಗಿ ಮಾಡುತ್ತೀವೆಂದ ದೊಡ್ಡಪ್ಪ ದೊಡ್ಡಮ್ಮನವರ ಪ್ರಮಾಣ ಹುಸಿಯಾದದ್ದು... ಪಾರಿ ಬಾವಿಗೆ ಹಾರಿದ್ದು... ಬದುಕಿ ಬಂದದ್ದು... ಆಕೆಯ ತಾಯಿ ಮನೆಯವರು ಬಂದು ಗಲಾಟೆ ಮಾಡಿದ್ದು...